## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: 2015–16ನೇ ಸಾಲಿನ 14ನೇ ಹಣಕಾಸು ಆಯೋಗದ ಮೊದಲನೇ ಕಂತಿನ ಸಾಮಾನ್ಯ ಮೂಲ ಅನುದಾನವನ್ನು ಹೊಸದಾಗಿ ಸೃಜಿಸಲಾದ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆ ಮಾಡುವ ಕುರಿತು.

**ಓದಲಾಗಿದೆ:**

1. ಭಾರತ ಸರ್ಕಾರದ ಪತ್ರ ಸಂ.ಎಫ್. 13(1), ಎಫ್ಎಫ್‌ಸಿ/ಎಫ್‌ಸಿಡಿ/2015–16, ದಿನಾಂಕ: 29–07–2015.
2. ಸರ್ಕಾರದ ಸಮಸಂಖ್ಯೆ ಆದೇಶ ದಿನಾಂಕ: 19–08–2015.
3. ಸರ್ಕಾರದ ಸಮಸಂಖ್ಯೆ ಆದೇಶ ದಿನಾಂಕ: 06–10–2015.

**ಪ್ರಸ್ತಾವನೆ:**

14ನೇ ಹಣಕಾಸು ಆಯೋಗದ ಶಿಫಾರಸ್ಸಿನನ್ವಯ 2015–16ನೇ ಸಾಲಿನಿಂದ 2019–20ರ ಸಾಲಿನವರೆಗಿನ 5 ವರ್ಷದ ಅವಧಿಗೆ ಸಾಮಾನ್ಯ ಮೂಲ ಅನುದಾನ ರೂ. 8359.79 ಕೋಟಿಗಳನ್ನು ಭಾರತ ಸರ್ಕಾರವು ನಿಗಧಿಪಡಿಸಿರುತ್ತದೆ.

ಪ್ರಸ್ತುತ 2015–16ನೇ ಸಾಲಿನ ಆರ್ಥಿಕ ವರ್ಷದ ಆಯವ್ಯಯದಲ್ಲಿ ಗ್ರಾಮ ಪಂಚಾಯತಿಯ ಲೆಕ್ಕ ಶೀರ್ಷಿಕೆ 2515–00–198–6–11–300(ಯೋಜನೇತರ)ಯಡಿ ರೂ. 100285/– ಲಕ್ಷಗಳನ್ನು ಒದಗಿಸಿರುತ್ತದೆ. 14ನೇ ಹಣಕಾಸು ಆಯೋಗದ 2015–16ನೇ ಸಾಲಿನ ಸಾಮಾನ್ಯ ಮೂಲ ಅನುದಾನದ (General Basic Grants) ಮೊದಲನೇ ಕಂತು ರೂ. 501,43,00,000/– (ಐದು ನೂರ ಒಂದು ಕೋಟಿ ನಲವತ್ತೂರು ಲಕ್ಷಗಳು ಮಾತ್ರ)ಗಳನ್ನು ಓದಲಾದ (1)ರ ಭಾರತ ಸರ್ಕಾರದ ಪತ್ರದನ್ವಯ ರಾಜ್ಯಕ್ಕೆ ಬಿಡುಗಡೆ ಮಾಡಿರುತ್ತದೆ.

ರಾಜ್ಯದಲ್ಲಿನ ಒಟ್ಟು 6006 ಗ್ರಾಮ ಪಂಚಾಯತಿಗಳಲ್ಲಿ ಓದಲಾದ (2)ರ ಸರ್ಕಾರದ ಆದೇಶದನ್ವಯ 5557 ಗ್ರಾಮ ಪಂಚಾಯತಿಗಳಿಗೆ 14ನೇ ಹಣಕಾಸು ಆಯೋಗದ ಸಾಮಾನ್ಯ ಮೂಲ ಅನುದಾನದ (General Basic Grants) ಮೊದಲನೇ ಕಂತು ರೂ. 473,06,44,751/– ಗಳನ್ನು ಬಿಡುಗಡೆಗೊಳಿಸಲಾಗಿತ್ತು. ಉಳಿದ ರೂ. 28,36,55,249/–ಗಳಲ್ಲಿ ರೂ. 21,27,41,437/– ಗಳ ಅನುದಾನವನ್ನು ಹೊಸದಾಗಿ ಸೃಜನೆಯಾಗಿರುವ 449 ಗ್ರಾಮ ಪಂಚಾಯತಿಗಳಿಗೆ ಓದಲಾದ (3)ರ ಸರ್ಕಾರದ ಆದೇಶದನ್ವಯ ಬಿಡುಗಡೆಗೊಳಿಸಲಾಗಿರುತ್ತದೆ.

ಮುಂದುವರೆದು, ಈಗಾಗಲೇ 449 ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಗೊಳಿಸಿರುವ ರೂ. 21.27 ಕೋಟಿಗಳೊಂದಿಗೆ ಬಾಕಿ ಉಳಿದಿರುವ ರೂ. 7,09,13,812 ಗಳನ್ನು ಸದರಿ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಗೊಳಿಸಲು ಸರ್ಕಾರವು ನಿರ್ಧರಿಸಿರುತ್ತದೆ.

ಅದರಂತೆ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 44 ಗ್ರಾಪಸ 2015, ದಿನಾಂಕ: 29–02–2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2015–16ನೇ ಸಾಲಿನ 14ನೇ ಹಣಕಾಸು ಆಯೋಗದ ಮೊದಲನೇ ಕಂತಿನ ಸಾಮಾನ್ಯ ಮೂಲ (General Basic Grants) ಅನುದಾನ ರೂ. 21,27,41,437/–ಗಳನ್ನು 449 ಗ್ರಾಮ ಪಂಚಾಯತಿಗಳಿಗೆ ಈಗಾಗಲೇ ಬಿಡುಗಡೆಗೊಳಿಸಲಾಗಿದ್ದು, ಬಾಕಿ ಉಳಿದಿರುವ ರೂ. 7,09,13,812 (ಏಳು ಕೋಟಿ ಒಂಬತ್ತು ಲಕ್ಷದ ಹದಿಮೂರು ಸಾವಿರದ ಎಂಟು ನೂರ ಹನ್ನೆರಡು ರೂಪಾಯಿಗಳು ಮಾತ್ರ)ಗಳ ಅನುದಾನವನ್ನು ಲೆಕ್ಕ ಶೀರ್ಷಿಕೆ 2515–00–198–6–11–300 (ಯೋಜನೇತರ)ರಡಿ ಬಿಡುಗಡೆಗೊಳಿಸಿ ಆದೇಶಿಸಿದೆ.

14ನೇ ಹಣಕಾಸು ಆಯೋಗದ ಸದರಿ ಅನುದಾನವನ್ನು ಜಿಲ್ಲಾ ಪಂಚಾಯತಿಗಳ ಡಿ.ಡಿ.ಓ (ಡ್ರಾಯಿಂಗ್ ಅಂಡ್ ಡಿಸ್ಬರ್ಸಿಂಗ್ ಕೋಡ್–ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಕೋಡ್) ಕೋಡ್‌ಗಳಿಗೆ ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಬೆಂಗಳೂರು (ಟಿ.ಎನ್.ಎಂ.ಸಿ) ಮೂಲಕ ಅಪ್‌ಲೋಡ್ ಮಾಡಲು ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರಿಗೆ ಅನುಮತಿಸಿದೆ.

ಜಿಲ್ಲಾ ಪಂಚಾಯತಿ, ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಜಿಲ್ಲಾ ವ್ಯಾಪ್ತಿಯ ಗ್ರಾಮ ಪಂಚಾಯತಿಗಳಿಗೆ ಅನುಬಂಧದ ಅನುಸಾರ (ಗ್ರಾಮ ಪಂಚಾಯತಿವಾರು ವಿವರಗಳು rdpr.kar.nic.in ನಲ್ಲಿ ಲಭ್ಯವಿರುತ್ತದೆ) ಅನುದಾನವನ್ನು ಬಿಡುಗಡೆಗೊಳಿಸುವುದು.

ಈ ಅನುದಾನವನ್ನು ಆರ್ಥಿಕ ಇಲಾಖೆಯ ಆರ್ಥಿಕ ಆಯೋಗ ಕೋಶದ ಟಿಪ್ಪಣಿ ಸಂಖ್ಯೆ: ಎಫ್‌ಡಿ 25 ಎಫ್‌ಸಿಸಿ 2015, ದಿನಾಂಕ:05-08-2015ರನ್ವಯ ಲೆಕ್ಕ ಶೀರ್ಷಿಕೆ 2515-00-198-6-11-300(ಯೋಜನೇತರ) ಯಡಿ ಗ್ರಾಮ ಪಂಚಾಯತಿಗಳಿಗೆ ಬಿಡುಗಡೆಗೊಳಿಸಲು ಈ ಆದೇಶವನ್ನು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಂ.ಬಿ.ಧೋತ್ರೆ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಇವರಿಗೆ:

1. ಮಹಾಲೇಖಪಾಲರು, (ಲೆಕ್ಕ ಪರಿಶೋಧನೆ ಮತ್ತು ಲೆಕ್ಕಪತ್ರ) ಕರ್ನಾಟಕ ಸಿ ಬ್ಲಾಕ್, ಹೊಸ ಕಟ್ಟಡ ಪಿ.ಬಿ. ನಂ.5398 ಬೆಂಗಳೂರು.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಳುಹಿಸುತ್ತಾ, ಸದರಿ ಅನುದಾನದ ಸಮರ್ಪಕ ಬಳಕೆ ಬಗ್ಗೆ ಸೂಕ್ತ ಮೇಲ್ವಿಚಾರಣೆ ನಡೆಸುವ ವ್ಯವಸ್ಥೆ ಕಲ್ಪಿಸಲು ತಿಳಿಸಿದೆ.
3. ರಾಜ್ಯದ ಮುಖ್ಯ ಲೆಕ್ಕಾಧಿಕಾರಿಗಳಿಗೆ/ಮುಖ್ಯ ಯೋಜನಾಧಿಕಾರಿಗಳಿಗೆ ಕಳುಹಿಸಿದೆ.
4. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಯ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ (ಎಲ್ಲಾ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳ ಮುಖಾಂತರ) ಸದರಿ ಅನುದಾನವನ್ನು ನಿಯಮಾನುಸಾರ ಬಳಕೆ ಮಾಡಲು ತಿಳಿಸಿದೆ.
5. ಖಜಾನಾಧಿಕಾರಿ, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
6. ಉಪ ನಿರ್ದೇಶಕರು, ಎನ್.ಎಂ.ಸಿ. ಖನಿಜ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು.
7. ಕರ್ನಾಟಕ ವಿಕಾಸ/ ವೆಬ್‌ಸೈಟ್.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

ಪ್ರತಿಯನ್ನು ಮಾಹಿತಿಗಾಗಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಕಾರ್ಯದರ್ಶಿಗಳು.
4. ಸರ್ಕಾರದ ಕಾರ್ಯದರ್ಶಿ, ಆರ್ಥಿಕ ಇಲಾಖೆ (ಬಿ&ಆರ್) ರವರ ಆಪ್ತ ಕಾರ್ಯದರ್ಶಿಗಳು.
5. ಸರ್ಕಾರದ ಉಪ ಕಾರ್ಯದರ್ಶಿ (ಆರ್ಥಿಕ ಆಯೋಗ ಕೋಶ), 4ನೇ ಮಹಡಿ, 4ನೇ ಹಂತ, ಬಹುಮಹಡಿ ಕಟ್ಟಡ, ರವರ ಆಪ್ತ ಸಹಾಯಕರು.
6. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಸಹಾಯಕರು.
7. ನಿರ್ದೇಶಕರು (ಪಂ.ರಾಜ್-1&2) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ರವರ ಆಪ್ತ ಸಹಾಯಕರು.

ಸರ್ಕಾರದ ಅದೇಶ ಸಂಖ್ಯೆ: ಗ್ರಾಅಪ 44 ಗ್ರಾಪಸ 2015, ದಿನಾಂಕ: 29-02-2016ರ ಅನುಬಂಧ

(ಗ್ರಾಪಂ) ಘೋಷ್ವಾರೆ Basic Grant 1st Installment 2015-16

| Sl.No | District | GP (In Rs) |
|---|---|---|
| 1 | ಬಾಗಲಕೋಟೆ | 6513343 |
| 2 | ಬೆಂಗಳೂರು ನಗರ | 3533230 |
| 3 | ಬೆಂಗಳೂರು ಗ್ರಾಮಾಂತರ | 1304901 |
| 4 | ಬೆಳಗಾವಿ | 4801182 |
| 5 | ಬಳ್ಳಾರಿ | 2976306 |
| 6 | ಬೀದರ್ | 1731319 |
| 7 | ವಿಜಯಪುರ | 3629146 |
| 8 | ಚಾಮರಾಜನಗರ | 1559359 |
| 9 | ಚಿಕ್ಕಬಳ್ಳಾಪುರ | 881644 |
| 10 | ಚಿಕ್ಕಮಗಳೂರು | 90242 |
| 11 | ಚಿತ್ರದುರ್ಗ | 831924 |
| 12 | ದಕ್ಷಿಣ ಕನ್ನಡ | 3550670 |
| 13 | ದಾವಣಗೆರೆ | 750045 |
| 14 | ಧಾರವಾಡ | 2311293 |
| 15 | ಗದಗ | 2234106 |
| 16 | ಕಲಬುರಗಿ | 8058464 |
| 17 | ಹಾಸನ | 1007645 |
| 18 | ಹಾವೇರಿ | 1944179 |
| 19 | ಕೊಡಗು | 743274 |
| 20 | ಕೊಪ್ಪಳ | 4027002 |
| 21 | ಮಂಡ್ಯ | 270282 |
| 22 | ಮೈಸೂರು | 5082629 |
| 23 | ರಾಯಚೂರು | 3753873 |
| 24 | ಶಿವಮೊಗ್ಗ | 1185943 |
| 25 | ತುಮಕೂರು | 1819432 |
| 26 | ಉಡುಪಿ | 1958752 |
| 27 | ಉತ್ತರ ಕನ್ನಡ | 2943927 |
| 28 | ಯಾದಗಿರಿ | 1419700 |
| Total | | 70913812 |

Under Secy. to Govt. (ZP)
Rural Devt. & pan. Raj. Dept